S C.R.P.67

Form No.4
(Criminal)
Deposition
Sheets
(R.P.No.57)

**5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ**

# ಸ್ಪೆಷಲ್ ಕೇಸ್ ನಂಬರ್ಃ 4/2021

**ಚಾ.ಸಾ.-8 ಪ್ರಾ.ಸಾ.-3**

| | |
|---|---|
| **ಸಾಕ್ಷಿದಾರರ ಹೆಸರು** | **ರಘು ಚಂದ್ರ** |
| **ತಂದೆಯ/ಗಂಡನ ಹೆಸರು** | **ಚನ್ನಶೆಟ್ಟಿ** |
| **ವಯಸ್ಸು** | **30 ವರ್ಷಗಳು** |
| **ಉದ್ಯೋಗ** | **ಚಾಲಕರು** |
| **ವಾಸ** | **ಕೆರಗೋಡು** |

**ದಿನಾಂಕಃ 18-08-2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ನಾನು 2020 ರಲ್ಲಿಯೂ ನಾನು ಆಟೋ ಚಾಲಕನಾಗಿದ್ದೆ . ಈಗ ನನಗೆ ತೋರಿಸುತ್ತಿರುವ ದಿನಾಂಕ 12-09-2020 ರ ಮಹಜರ್ ನಲ್ಲಿರು ಸಹಿ ನನ್ನದ್ದು . ಅದನ್ನು ನಿಪಿ 7 ಎಂದು, ಸಾಕ್ಷಿಯ ಸಹಿಯನ್ನು ನಿಪಿ 7-ಎ ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಭಾವಚಿತ್ರಗಳಲ್ಲಿ ನಾನು ಕಂಡು ಬರುತ್ತೇನೆ. ಅದನ್ನು ಈಗ ನಿಪಿ 8 ಎಂದು ಗುರುತಿಸಲಾಯಿತು. ಅದನ್ನು ಕೆರಗೋಡು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಯಾಕೆ ಸಹಿ ಪಡೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಅಭಿಷೇಕ್ ಬಾರ್ ಬಳಿ ಪೊಲೀಸರು ನನ್ನ ಸಮಕ್ಷಮ ಮಹಜರ ಮಾಡಿದ್ದಾರೆ . ಜಾಗ ಯಾರು ತೋರಿಸಿಕೊಟ್ಟಿದ್ದಾರೆ ಎಂದರೆ ಸಾಕ್ಷಿದಾರರು ಗೋಪಿ ತೋರಿಸಿರಬಹುದು. ಅವರು ಅಂಕಣ್ಣದೊಡ್ಡಿಯವರು. ನಿಪಿ 8 ಭಾವ ಚಿತ್ರದಲ್ಲಿ ಅವರು ಕೂಡಾ ಕಂಡು ಬರುತ್ತಾರೆ.

ಅದರಲ್ಲಿ ರಘು ಎಂಬುವವರು ಕೂಡಾ ಕಂಡು ಬರುತ್ತಾರೆ. ಭಾವಚಿತ್ರಗಳನ್ನು ಕೆರಗೋಡಿನ ಅಭಿಷೇಕ್ ಬಾರನಲ್ಲಿ ತೆಗೆದಿರುತ್ತಾರೆ. ಗೋಪಿ ನನ್ನನ್ನು ಕರೆದುಕೊಂಡು ಹೋಗಿದ್ದರು ಆನಂತರ ಪೊಲೀಸರು ಬಂದಿದ್ದರು. ಯಾವ ಕಾರಣಕ್ಕಾಗಿ ಭಾವ ಚಿತ್ರ ತೆಗೆಯಲಾಗಿದೆ ಗೊತ್ತಿಲ್ಲ. ನಾನು ಸಹಿ ಮಾಡಿದ ದಾಖಲೆಯಲ್ಲಿ ಏನು ಬರೆಯಲಾಗಿದೆ ಎಂದು ನಾನು ಓದಿಲ್ಲ. ಸದರಿ ಭಾವ ಚಿತ್ರಗಳಲ್ಲಿ ಕೈ ತೋರಿಸುತ್ತಿರುವವರು ಗೋಪಿ ಆಗಿದ್ದಾರೆ . ಅವರು ಏನು ತೋರಿಸುತ್ತಿದ್ದಾರೆ ನನಗೆ ಗೊತ್ತಿಲ್ಲ.

(**ಈ ಹಂತದಲ್ಲಿ ಮಾನ್ಯ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಪರಿಶೀಲಿಸಿ ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 157 ರ ಪ್ರಕಾರ ಅನುಮತಿ ಕೊಡಲಾಯಿತು.**)

**ಪಾಟೀಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 12-09-2020 ರಂದು ಕೆರಗೋಡು ಪೋಲೀಸರು ನನ್ನನು ಅಭಿಷೇಕ್ ಬಾರ್ ಅಂಡ್ ರಸ್ಟೊರೆಂಟ್ ಬಳಿ ಕರೆದಿದ್ದರು ಎಂದರೆ ಸರಿ . ಅಲ್ಲಿ ನನಗೆ ಈ ಪ್ರಕರಣದ ವಿಚಾರಗಳನ್ನು ತಿಳಿಸಿದ್ದರು ಎಂದರೆ ಸರಿಯಲ್ಲ. ನಾನು ಮಹಜರ್ ಸಾಕ್ಷಿಯಾಗಿ ಒಪ್ಪಿ ಅಲ್ಲಿ ಹಾಜರಿದ್ದೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಚಾಸಾ 1 ರವರು ಅದೇ ಬಾರನಲ್ಲಿ ಆರೋಪಿ ಅಭಿ ತನಗೆ ಬೈದಿದ್ದು ಎಂದು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಅಲ್ಲದೇ ಒಂದು ಟೇಬಲ್ ತೋರಿಸಿ ಇದೇ ಟೇಬಲ್ ನಲ್ಲಿ ಆರೋಪಿ ಕುಳಿತು ತನ್ನನ್ನುಜಾತಿನಿಂದನೆ ಮಾಡಿದರು ಎಂದು ತೋರಿಸಿದ್ದರು ಎಂದರೆ ಸರಿಯಲ್ಲ. ಆರೋಪಿ ರೀತಿ ತೋರಿಸುವ ಸಮಯದಲ್ಲಿ ನಿಪಿ 8 ರ 2 ನೇ ಭಾವ ಚಿತ್ರ ತೆಗೆಯಲಾಗಿತ್ತು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಗೊತ್ತಿದ್ದರೂ ನಾನು ಸುಳ್ಳ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು 3-35 ರಿಂದ 4-00 ಗಂಟೆ ನಡುವೆ ನನ್ನ ಸಮಕ್ಷಮ ಅಭಿಷೇಕ್ ಬಾರ್ ಅಂಡ್ ರೆಸ್ಟೊರೆಂಟನಲ್ಲಿ ಬರೆದರು ಎಂದರೆ ಸರಿಯಲ್ಲ. ಅದರಲ್ಲಿ ಬರೆದಿರುವ ವಿಚಾರಗಳನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು 9 ನೇ ತರಗತಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. ನನಗೆ ವ್ಯವಹಾರ ಜ್ಞಾನ ಇರುತ್ತದೆ. ನಾನು ಸಾಮಾನ್ಯವಾಗಿ ದಾಖಲೆಗಳನ್ನು ಓದಿ ಸಹಿ ಮಾಡುತ್ತೇನೆ ಎಂದರೆ ಸರಿ . ಓದಿ ಸಹಿ ಮಾಡಲು ಯಾವುದೇ ತೊಂದರೆ ಇರಲಿಲ್ಲ. ಪೊಲೀಸರು ನನಗೆ ಹೆದರಿಸಿ ಸಹಿ ಪಡೆದುಕೊಂಡಿಲ್ಲ. ನಿಪಿ 7 ರಲ್ಲಿ ಬರೆದಿರುವ

ವಿಷಯಗಳು ಗೊತ್ತಿದ್ದೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಪ್ರಸ್ತುತ ತೀರಿಕೊಂಡಿರುತ್ತಾರೆ . ಆರೋಪಿತರನ್ನು ನನಗೆ ಪರಿಚಯ ಇರುತ್ತದೆ. ಚಾಸಾ 1 ರವರು ಈಗ ತೀರಿಕೊಂಡಿರುವುದರಿಂದ ಈಗ ಸತ್ಯ ಹೇಳಿದರೂ ಉಪಯೋಗ ವಿಲ್ಲ ವೆಂದು ತಿಳಿದು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಯಲ್ಲ.

**<u>ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ಅಭಿಷೇಕ್ ಬಾರ್ ಎಲ್ಲಿದೆ ಎಂದು ನಿಗದಿತವಾಗಿ ನನಗೆ ಹೇಳಲು ಸಾಧ್ಯವಿಲ್ಲ. ಪೋಲೀಸರು ನನಗೆ ನೋಟೀಸ್ ಜಾರಿ ಮಾಡಿಲ್ಲ. ಚಾಸಾ 1 ರವರು ನನಗೆ ಯಾವುದೇ ಮಾಹಿತಿ ಹೇಳಿಲ್ಲ ವೆಂದರೆ ಸರಿ . ಚಾಸಾ 1 ರವರ ಮೇಲೆ ಹೊಡೆದಾಟದ ಬೇರೆ ಕೇಸುಗಳು ಇರುತ್ತದೆ ಎಂದರೆ ಸರಿ. ನಾನು ಸಹಿಯನ್ನು ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ ಎಂದರೆ ಸರಿ. ಪೊಲೀಸರು ಖಾಲಿ ಪತ್ರಕ್ಕೆ ಸಹಿ ಮಾಡಿಸಿಕೊಂಡಿದ್ದಾರೆ ಎಂದರೆ ಸರಿ. ಪೊಲೀಸ್ ಠಾಣೆಯಲ್ಲಿ ಟೇಬಲ್ ಗಳು ಇರುತ್ತವೆ ಎಂದರೆ ಸರಿ . ನಿಪಿ 8 ರ 2 ನೇ ಭಾವ ಚಿತ್ರ ಪೊಲೀಸ್ ಠಾಣೆಯಲ್ಲಿ ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ 8 ರ 2 ನೇ ಭಾವ ಚಿತ್ರದಲ್ಲಿ ಯಾರು ಮದ್ಯಪಾನ ಮಾಡುತ್ತಿರುವುದು ಕಂಡು ಬರುವುದಿಲ್ಲವೆಂದರೆ ಸರಿ. ನಿಪಿ 8 ರ 1 ನೇ ಭಾವ ಚಿತ್ರದಲ್ಲಿ ನಾನು ಕಂಡು ಬರುವುದಿಲ್ಲ. ಗಲಾಟೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇರುವುದಿಲ್ಲ</u>**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಎಂ.ಸಿ ನಂಜೇಗೌಡ)**

5 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ

ನ್ಯಾಯಾಲಯ, ಮಂಡ್ಯ